# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸರ್ವಜ್ಞನಗರ ವಿದಾನಸಭಾ ಕ್ಷೇತ್ರದ ವ್ಯಾಪ್ತಿಯ ವಾರ್ಡ್ ಸಂಖ್ಯೆ.28, ಕಮ್ಮನಹಳ್ಳಿಗೆ ಸಂಬಂಧಿಸಿದಂತೆ ವಾರ್ಡ್ ಸಮಿತಿಯ ಸಭೆಯನ್ನು ದಿನಾಂಕ: 18-02-2022 ರಂದು ಆಯೋಜಿಸಿದ್ದು, ಸದರಿ ವಾರ್ಡ್ ಸಮಿತಿ ಸಭೆಯ ನಡವಳಿಗಳು**

1. ಶ್ರೀ ನಾಗಪ್ಪ ಕಮತಿ (ನೋಡಲ್ ಅಧಿಕಾರಿ)
2. ಶ್ರೀ ಎಸ್. ರಾಜನ್ (ಸಹಾಯಕ ಅಭಿಯಂತರರು ಹಾಗೂ ಕಾರ್ಯದರ್ಶಿಗಳು)
3. ಶ್ರೀ ಹನುಮಂತಪ್ಪ, ಹಿರಿಯ ಆರೋಗ್ಯ ನಿರೀಕ್ಷಕರು,
4. ಶ್ರೀ ಮಂಜುನಾಥ, ಸಹಾಯಕ ಅಭಿಯಂತರರು, ಬಿ.ಡ.ಬ್ಲ್ಯೂ.ಎಸ್.ಎಸ್.ಬಿ ಇಲಾಖೆ,
5. ಶ್ರೀಮತಿ ಶ್ರೀಲಕ್ಷ್ಮಿ, ಕಿರಿಯ ಆರೋಗ್ಯ ನಿರೀಕ್ಷಕರು,
6. ಶ್ರೀ ಶ್ರೀನಿವಾಸ್, ಕಂದಾಯ ನಿರೀಕ್ಷಕರು,
7. ಶ್ರೀ ಜೋಶ್ವಾ, ಕರ ವಸೂಲಿಗಾರರು,
8. ಶ್ರೀಮತಿ ರಾಜಶ್ರೀ, ಕಲ್ಯಾಣ ಇಲಾಖೆ,
9. ಶ್ರೀ ಮುರುಗದಾಸ್, ಸ್ಥಳೀಯರು,
10. ಶ್ರೀ ಮುರುಳಿ, ಸ್ಥಳೀಯರು,
11. ಶ್ರೀ ಸುರೇಶ್, ಸ್ಥಳೀಯರು,
12. ಶ್ರೀ ಕೆಂಪರಾಜ, ಸ್ಥಳೀಯರು,

ಈ ಸಭೆಗೆ ಹಾಜರಾಗಿದ್ದ ಅಧ್ಯಕ್ಷರು (ನೋಡೆಲ್ ಅಧಿಕಾರಿ) ಹಾಗೂ ಅಧಿಕಾರಿಗಳನ್ನು ವಾರ್ಡ್‌ನ ಸದಸ್ಯ ಕಾರ್ಯದರ್ಶಿ ಹಾಗೂ ಸಂಚಾಲಕರು, ವಾರ್ಡ್ ಕಮಿಟಿ ಸಮಿತಿ ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ನೌಕರರು ಹಾಗೂ ಸದಸ್ಯರುಗಳನ್ನು ಸ್ವಾಗತ ಕೋರಿ, ಸಭೆಯನ್ನು ಪ್ರಾರಂಭಿಸಲಾಯಿತು.

1) **ಶ್ರೀ ಕೆಂಪರಾಜ, ಸ್ಥಳೀಯರು ಮಾತನಾಡುತ್ತಾ,**

- ಕಮ್ಮನಹಳ್ಳಿ ಮುಖ್ಯರಸ್ತೆಯಲ್ಲಿ ಮಟನ್ ಶಾಪ್ ಮತ್ತು ಚಿಕನ್ ಶಾಪ್ ನವರು ರಸ್ತೆಯಲ್ಲಿ ಕತ್ತರಿಸಿ, ಚರಂಡಿಯಲ್ಲಿ ಬಿಡುತ್ತಿರುವುದು ಕಂಡು ಬಂದಿದ್ದು, ಸದರಿ ಅಂಗಡಿ ಮಾಲೀಕರಿಗೆ ನೋಟೀಸ್ ಜಾರಿ ಮಾಡಲು ಸಭೆಯಲ್ಲಿ ತಿಳಿಸಿದರು.
- ಐ.ಓ.ಸಿ ಸುತ್ತಮುತ್ತಲಿನ ಪ್ರದೇಶದಲ್ಲಿ ಬಿದ್ದಿರುವ ಕಸವನ್ನು ಕೂಡಲೇ ತೆರವುಗೊಳಿಸಲು ಸಭೆಗೆ ತಿಳಿಸಿದರು.
- ಮುನಿಸ್ವಾಮಪ್ಪ ರಸ್ತೆಯಲ್ಲಿ ಸ್ಥಿರಶಾಂತಿ ವಾಹನವನ್ನು ರಸ್ತೆಯಲ್ಲಿ ಅಡ್ಡಲಾಗಿ ನಿಲ್ಲಿಸಿದ್ದು, ಸಾರ್ವಜನಿಕರಿಗೆ ಓಡಾಡಲು ತೊಂದರೆಯಾಗುತ್ತಿದ್ದು, ಕೂಡಲೇ ಅದನ್ನು ಸದರಿ ಸ್ಥಳದಿಂದ ತೆರವುಗೊಳಿಸಲು ಸಭೆಗೆ ತಿಳಿಸಿದರು.

2) **ಶ್ರೀ ಮುರುಳಿ, ಸ್ಥಳೀಯರು ಮಾತನಾಡುತ್ತಾ,**

- ನವ ನಗರೋತ್ಥಾನ ಕಾಮಗಾರಿ ಮಂಜೂರಾಗಿದ್ದು, ಇದುವರೆವಿಗೂ ಕಾಮಗಾರಿಯನ್ನು ಪ್ರಾರಂಭಿಸಿರುವುದಿಲ್ಲ, ಆದುದರಿಂದ ಈಗಾಗಲೇ ಮಂಜೂರಾಗಿರುವ ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮ ವಹಿಸಲು ಸಭೆಗೆ ತಿಳಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರು ಸರಬರಾಜನ್ನು ರಾತ್ರಿ ಸಮಯದಲ್ಲಿ ನೀರನ್ನು ಬಿಡುತ್ತಿರುವುದರಿಂದ ಸಾರ್ವಜನಕರಿಗೆ ತೊಂದರೆಯಾಗುತ್ತಿದ್ದು, ಹಗಲು ಸಮಯದಲ್ಲಿ ವಾರಕ್ಕೆ

ಮೂರು ಬಾರಿ ನೀರು ಸರಬರಾಜು ಮಾಡಲು ಸಭೆಯಲ್ಲೀ ಈಗಾಗಲೇ ಅನೇಕ ಭಾರಿ ಪ್ರಸ್ತಾಪಿಸಲಾಗಿದ್ದರೂ ಸಹ ಈವರೆವಿಗೂ ಅದೇ ಮುಂದುವರೆದಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಬಗ್ಗೆ ಸಭೆಯಲ್ಲಿ ಆಕ್ಷೇಪಣೆ ವ್ಯಕ್ತಪಡಿಸಿದರು.

3) **ಶ್ರೀ ಸುರೇಶ್, ಸ್ಥಳೀಯರು, ಮಾತನಾಡುತ್ತಾ,**

- ಗುರುಮೂರ್ತಿ ರಸ್ತೆಯಲ್ಲಿ ಚರಂಡಿಯಲ್ಲಿ ಹೂಳು ತುಂಬಿದ್ದು, ಮಳೆಗಾಲ ಪ್ರಾರಂಭವಾಗಿರುವುದರಿಂದ ಮಳೆಯ ನೀರು ಸರಾಗವಾಗಿ ಹರಿಯದೇ ಶೇಖರಣೆಯಾಗುತ್ತಿರುವದರಿಂಧ ನೀರು ರಸ್ತೆಗೆ ಹರಿಯುವ ಸಾಧ್ಯತೆ ಇರುವುದನ್ನು ಸರಿಪಡಿಸಲು ಸಭೆಗೆ ತಿಳಿಸಿದರು.
- ಸದಾಶಿವ ದೇವಸ್ಥಾನ ರಸ್ತೆಯ, 8ನೇ ಅಡ್ಡರಸ್ತೆಯಲ್ಲಿ ಚರಂಡಿಯನ್ನು ಅಭಿವೃದ್ಧಿಪಡಿಸಲು ಸಭೆಗೆ ತಿಳಿಸಿದರು.

4) **ಶ್ರೀ ಮುರುಗದಾಸ್, ಸ್ಥಳೀಯರು, ಮಾತನಾಡುತ್ತಾ,**

- ವಾರ್ಡ್ ವ್ಯಾಪ್ತಿಯಲ್ಲಿರುವ ಬೆಂಗಳೂರು ಒನ್ ಕೇಂದ್ರದ ಎದುರುಗಡೆ ಇರುವ ಖಾಲಿ ಜಾಗಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿರುವ ಪ್ರಕರಣದ ಪ್ರಸ್ತುತ ಸ್ಥಿತಿಗತಿಯ ಬಗ್ಗೆ ತಿಳಿಸಲು ಸಭೆಗೆ ತಿಳಿಸಿದರು.

ಇಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿರುವ ಎಲ್ಲಾ ವಿಷಯಗಳ ಬಗ್ಗೆ ಆಯಾ ಇಲಾಖೆಯ ಅಧಿಕಾರಿ / ನೌಕರರುಗಳು ಕ್ರಮ ಕೈಗೊಂಡು ಮುಂದಿನ ಸಭೆಗೆ ತಿಳಿಸಲು ಸೂಚಿಸಿದರು.

**ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು**
**ವಾರ್ಡ್ ಸಂಖ್ಯೆ.28, ಕಮ್ಮನಹಳ್ಳಿ,**

**ನೋಡೆಲ್ ಅಧಿಕಾರಿ**
**ವಾರ್ಡ್ ಸಂಖ್ಯೆ.28, ಕಮ್ಮನಹಳ್ಳಿ**

**ಪ್ರತಿಯನ್ನು**

1) ಕಾರ್ಯಪಾಲಕ ಅಭಿಯಂತರರು, ಸರ್ವಜ್ಞನಗರ ವಿಭಾಗ, ಬಿ.ಬಿ.ಎಂ.ಪಿ
2) ಕಾರ್ಯಪಾಲಕ ಅಭಿಯಂತರರು, ಯೋಜನೆ (ಪೂರ್ವ ವಲಯ) ಬಿ.ಬಿ.ಎಂ.ಪಿ
3) ಕಾರ್ಯಪಾಲಕ ಅಭಿಯಂತರರು, ವಿದ್ಯುತ್ (ಪೂರ್ವ ವಲಯ) ಬಿ.ಬಿ.ಎಂ.ಪಿ
4) ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ.
5) ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ
6) ಕಾರ್ಯಪಾಲಕ ಅಭಿಯಂತರರು, ರಸ್ತೆ ಮತ್ತು ಮೂಲಭೂತ ಸೌಕರ್ಯಗಳು.ಬಿ.ಬಿ.ಎಂ.ಪಿ
7) ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ ವಿಭಾಗ, ಬಿ.ಬಿ.ಎಂ.ಪಿ
8) ತೋಟಗಾರಿಕಾ ಅಧೀಕ್ಷಕರು, (ಪೂರ್ವ ವಲಯ)
9) ಆರೋಗ್ಯ ವೈದ್ಯಾಧಿಕಾರಿಗಳು, (ಪೂರ್ವ ವಲಯ)
10) ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣಾ ವಿಭಾಗ
11) ಸಹಾಕಯ ಕಂದಾಯ ಅಧಿಕಾರಿ. ಮಾರುತಿ ಸೇವಾ ನಗರ ಉಪವಿಭಾಗ
12) ಕಲ್ಯಾಣಾದಿಕಾರಿಗಳು, (ಪೂರ್ವ ವಲಯ) ಬಿ.ಬಿ.ಎಂ.ಪಿ
13) ಉಪ ವಲಯ ಅರಣ್ಯ ಸಂರಕ್ಷಣಾಧಿಕಾರಿಗಳು, (ಪೂರ್ವ ವಲಯ) ಬಿ.ಬಿ.ಎಂ.ಪಿ
14) ಪೋಲಿಸ್ ಇನ್ಸ್‌ಪೆಕ್ಟರ್, (ಕಾನೂನು ಮತ್ತು ಸುವ್ಯವಸ್ಥೆ) ಬಾಣಸವಾಡಿ.
15) ಪೋಲಿಸ್ ಇನ್ಸ್‌ಪೆಕ್ಟರ್ -(ಸಂಚಾರಿ), ಬಾಣಸವಾಡಿ.
16) ಕಛೇರಿ ಪ್ರತಿ.